ಹೋಗಿ ಚಂದ್ರಪ್ಪನವರನ್ನು ಗುಂಡು ಹೊಡೆದು ಕೊಲ್ಲುವುದಕ್ಕೆ ಹೊರಟಿದ್ದರು. ನಿಜಕ್ಕೂ ಅವರದ್ದೇನೂ ತಪ್ಪಿರಲಿಲ್ಲ. ಇವರೇ, ಸತ್ಯಾಸತ್ಯ ತಿಳಿದುಕೊಳ್ಳದೆ ಜಗಳ ಕಾದದ್ದು. ಗೊತ್ತಲ್ಲ ನಿನಗೆ ಅವರ ಮುಂಗೋಪ. ನೀನು ಕೈಗೆ ಸಿಗೋದಿಲ್ಲ ಅಂತ ಖಾತ್ರಿಯಾದ ಮೇಲೆ ಅವರನ್ನು ಹಿಡಿದಿಡೋಕೆ ಸಾಧ್ಯವೇ ಆಗಲಿಲ್ಲ', ಗಂಗಮ್ಮ ನಿಗೂಢವೊಂದರ ಬೇರುಗಳನ್ನು ಅಲುಗಾಡಿಸಿಬಿಟ್ಟರು.

'ಈಗ ಅದೆಲ್ಲ ಬೇಡ. ಅವರ ಮನಸ್ಸು ಶುದ್ಧವಾಗಿತ್ತು ಎಂಬುದು ಈಗ ಸಾಬೀತಾಯಿತು ನೋಡು. ಇನ್ನದರ ಬಗ್ಗೆ ಮಾತು ಬೇಡ. ಹೋಗು ಮಲಕ್ಕೋಮ್ಮಾ', ಭಾಸ್ಕರ್ ತನ್ನ ಕೆಲಸದಲ್ಲಿ ತೊಡಗಿಕೊಂಡರು.

'ನನಗೆ ಇನ್ನೂ ಕೆಲವು ವಿಚಾರ ನಿನ್ನತ್ರ ಹೇಳ್ಬೇಕು ಕಣೋ' ಅಮ್ಮ ಅಲ್ಲೇ ನಿಂತರು.

'ಏನಮ್ಮಾ ಏನದು?' ಭಾಸ್ಕರ್ ಕೂಲಾಗಿ ಕೇಳಿದರು.

'ನನಗಂತೂ ಕೈಕಾಲಿಗೆ ಶಕ್ತಿ ಕಡಿಮೆಯಾಗಿದೆ. ಇನ್ನೆಷ್ಟು ಕಾಲವೊ ಏನೊ. ಹೇಳಿದ್ರೆ, ಮದ್ವೆ ಬೇಡಾಂತ ಒಂದೇ ಮಾತು ಹೇಳ್ತಿ. ನನ್ನ ಕಾಲ ಮುಗಿದ ಮೇಲೆ ಇನ್ನೇನ್ನಾಡ್ತಿ? ನಮ್ಮ ವಂಶ ಇಲ್ಲಿಗೇ ಮುಗಿದು ಹೋಗ್ಬೇಕಾ?'

'ಅಯ್ಯೊ, ಅದೆಲ್ಲ ಮಾತು ಈಗ ಬೇಡಮ್ಮಾ, ಮಾತೆತ್ತಿದರೆ ಮದುವೆ ಅಂತೀಯಲ್ಲ. ನಾನಿನ್ನೂ ಮಾಡ್ಬೇಕಾದ ಕೆಲ್ಸ ಬಹಳಷ್ಟಿದೆ. ನೀನು ಹೋಗಮ್ಮಾ, ಹೋಗಿ ಮಲಕ್ಕೊ' ಪ್ರೊ. ಭಾಸ್ಕರ್ ಮತ್ತೆ ಫೈಲ್‌ನಲ್ಲಿ ಮುಳುಗಿಹೋದರು.

ಅಮ್ಮ ಕಣ್ಣೊರಸಿಕೊಳ್ಳುತ್ತ, 'ಈಗ ಅಲ್ಲದಿದ್ರೆ ಇನ್ಯಾವಾಗ? ಪ್ರಾಯ ಎಷ್ಟಾಯ್ತೂಂತ ತಿಳಿದಿದ್ದೀಯಾ? ನಾನು ಹೇಳುವಷ್ಟು ಹೇಳಿದ್ದೇನೆ. ದೇವರು ನಿನಗೆ ಹೇಗೆ ಬುದ್ಧಿ ಕೊಡ್ತಾನೋ ಹಾಗೇ ಮಾಡು, ನನ್ನಿಂದೇನಾದೀತು?' ಎನ್ನುತ್ತ ಕಣ್ಣೊರೆಸಿಕೊಂಡು ತನ್ನ ಕೋಣೆಗೆ ಹೊರಟುಹೋದರು.

ಅಮ್ಮ ಹೋದ ಮೇಲೆ ಪ್ರೊ. ಭಾಸ್ಕರ್ ಒಂದು ಕ್ಷಣ ಯೋಚಿಸಿದರು. ಫೈಲುಗಳೆಲ್ಲ ಗೋಜಲಾದಂತಾಗಿ ಮನಸ್ಸಿಗೆ ಕಿರಿಕಿರಿಯಾಯಿತು. ಕಪಾಟಿನಿಂದ ವಿಸ್ಕಿ ಬಾಟಲು ತೆಗೆದು ಗ್ಲಾಸಿಗೆ ಸುರಿದುಕೊಂಡರು. ಚಾರ್‌ಮಿನಾರ್ ಸಿಗರೇಟಿಗೆ ಬೆಂಕಿ ಹಚ್ಚಿ ಗ್ಲಾಸಿನೊಂದಿಗೆ ಕೋಣೆಯ ಸಿಟೌಟಿಗೆ ಸರಿದು ಆರಾಮ ಕುರ್ಚಿಯಲ್ಲಿ ಕುಳಿತು ವಿಸ್ಕಿ ಗುಟುಕರಿಸಿದರು. ಅದೆಷ್ಟು ಹೊತ್ತಾಯಿತೋ, ಅಲ್ಲೇ ನಿದ್ದೆ ಹೋದರು. ಮಾರನೆಯ ದಿನ ಎದ್ದವರೆ ಸಂಶೋಧನಾ ಕೇಂದ್ರದಲ್ಲಿ ಅಂದು ನಡೆಯಲಿದ್ದ ಸಭೆಯ ಪೂರ್ವಸಿದ್ಧತೆ ಮಾಡಿಕೊಂಡರು. ಹಿಂದಿರುಗುವುದು ಕತ್ತಲಾದೀತೆಂದು ಅಮ್ಮನಿಗೆ ಹೇಳಿ ವೀರನಗರದ ಕಡೆಗೆ ಹೊರಟರು.

ವೀರನಗರದ ಸುತ್ತಮುತ್ತಣ ಗಣ್ಯ ಪ್ಲಾಂಟರುಗಳೆಲ್ಲ ಅಲ್ಲಿ ಸೇರಿದ್ದರು. ಪ್ಲಾಂಟರ್ ಚಂದ್ರಪ್ಪ, ಪ್ಲಾಂಟರ್ ಸೋಮಣ್ಣ ಅವರಲ್ಲಿ ಪ್ರಮುಖರು. ಪ್ರೊ. ಭಾಸ್ಕರ್, ನಿರ್ದೇಶಕ ಡಾ. ಚೆಂಗಪ್ಪ ವೇದಿಕೆಯ ಮೇಲೆ ಕುಳಿತಿದ್ದರು. ತನ್ನ ಸಂಶೋಧನೆಯ ಉದ್ದೇಶ, ಪ್ರಯೋಜನಗಳ ಬಗ್ಗೆ ಬಹಳ ಚುಟುಕಾಗಿ ಮಾತನಾಡಿದ ಪ್ರೊ. ಭಾಸ್ಕರ್‌ರ ಕೆಲವು ಮಾದರಿಗಳನ್ನು ಪ್ರದರ್ಶನಕ್ಕಿಟ್ಟು, ಆ ಬಗ್ಗೆ ಸಂದೇಹಗಳೇನಾದರೂ ಇದ್ದರೆ ಪ್ರಶ್ನಿಸುವುದಕ್ಕೆ ಆಸ್ಪದ ಕೊಟ್ಟರು. ಪ್ಲಾಂಟರ್ ಸೋಮಣ್ಣನವರು. 'ಅಲ್ಲಾ ಸಾರ್, ಅದೇನೋ ಸರಿ, ನೀವು ಎಲೆಯಿಂದ ಗಿಡ ಮಾಡಬಹುದು, ನಿಜ. ಗಿಡ ಮಾಡೋದಕ್ಕೆ ಅಷ್ಟೊಂದು ಕಷ್ಟಪಡಬೇಕೆ? ಬೀಜ ಹಾಕಿದರಾಯ್ತಲ್ಲ' ಎಂದರು. ಸಭೆಯಲ್ಲಿ ನಗೆಯ ಅಲೆ ಎದ್ದಿತು.

'ನೀವನ್ನೋದೇನೊ ನಿಜ. ಇಲ್ಲಿ ನಾವು ಗಿಡಗಳನ್ನು ಬೆಳೆಸುವ ಹಂತದಲ್ಲಿ ಕೆಲವು ರಾಸಾಯನಿಕ ದ್ರವ್ಯಗಳನ್ನು ಬಳಸುತ್ತೇವೆ. ಪರಿಣಾಮವಾಗಿ ಹುಟ್ಟುವ ಸಾವಿರಾರು ಸಸಿಗಳು ರೊಬಸ್ಟಾ, ಅರೇಬಿಕಾ ತಳಿಗಳಿಗಿಂತ ಅನೇಕ ವಿಧದಲ್ಲಿ ಭಿನ್ನವಾಗಿರುತ್ತವೆ. ಒಂದೊಂದು ಸಸಿಯೂ ಕ್ಷಿಪ್ರವಾಗಿ ಹಾಗೂ ಅನಿರೀಕ್ಷಿತವಾಗಿ ಫಸಲನ್ನು ಕೊಡಬಲ್ಲುದು. ರೊಬಸ್ಟಾ ಗಿಡದ ಹಾಗೆ ದೀರ್ಘಕಾಲ ಬಾಳಬಲ್ಲುದು. ಎರಡನೆಯ ವರ್ಷದಲ್ಲೇ ಈಗಿರುವ ಯಾವುದೇ ಗಿಡ ಕೊಡಬಹುದಾದ್ದಕ್ಕಿಂತ ಸುಮಾರು ಐದು ಪಟ್ಟು ಅಧಿಕ ಫಸಲನ್ನು ಕೊಡಬಲ್ಲುದು. ಅಂಥ ಚೈತನ್ಯ ಪ್ರತಿ ಸಸಿಗೆ ಇದೆಯೆಂಬುದು ಈಗಾಗಲೇ ಇತರ ಗಿಡಗಳ ಮೇಲೆ ನಡೆಸಿದ ಸಂಶೋಧನೆಗಳಿಂದ ಸಾಬೀತಾಗಿದೆ. ಕಾಫಿ ಗಿಡಗಳ ಮೇಲೂ ಒಂದಷ್ಟು ಸಂಶೋಧನೆಗಳಾಗಿವೆ. ಅಂತಿಮ ಹಂತದ ಗೊಂದಲ ಎಲ್ಲ ಕಡೆಯೂ ಇದೆ. ಪ್ರಗತಿಯ ಬಗ್ಗೆ ಮತ್ತೆ ಮತ್ತೆ ಹೊಸ ಹೊಸ ಬಗೆಯ ಸಂಶೋಧನೆಗಳು ನಡೆಯಬೇಕಾಗಿದೆ. ಫಲಶ್ರುತಿ ಅದ್ಭುತ ಗುಣಮಟ್ಟದ್ದಾಗಿರಬೇಕು ಎಂಬ ಆಕಾಂಕ್ಷೆ ನಮ್ಮದಾಗಿದೆ. ಕಾಫಿ ಗಿಡಗಳ ನಡುವೆಯೇ ಇದ್ದು ಸಂಶೋಧನೆ ಮಾಡುವುದರಿಂದ ತಪ್ಪು ಒಪ್ಪುಗಳನ್ನು ಇಲ್ಲಿಯೇ ಕಂಡುಕೊಳ್ಳಬಹುದು. ದೆಹಲಿಯಲ್ಲಾಗಲೀ ಮುಂಬಯಿಯಲ್ಲಾಗಲೀ ಇಂತಹ ದಿಢೀರ್ ಪ್ರಯೋಗದ ಅವಕಾಶ ಇರುವುದಿಲ್ಲ. ಈ ಸಂಶೋಧನೆಯಲ್ಲಿ ನಾವು ಯಶಸ್ವಿಯಾದರೆ ನಮ್ಮನ್ನು ಜಾಗತಿಕ ಮಟ್ಟದಲ್ಲಿ ಗುರುತಿಸುವ ಎಲ್ಲ ಸಾಧ್ಯತೆಗಳೂ ಇವೆ. ಮಾತ್ರವಲ್ಲದೆ ನಮ್ಮ ಪ್ಲಾಂಟರ್‌ಗಳೆಲ್ಲ ಮಹಾಸಂಪನ್ನರಾಗುತ್ತಾರೆ' ಪ್ರೊ. ಭಾಸ್ಕರ್ ಉತ್ತರಿಸಿದರು.

'ಎಷ್ಟು ಕಾಲ ನಾವು ಫಲಿತಾಂಶಕ್ಕಾಗಿ ಕಾಯಬೇಕಾದೀತು?'

'ಕೇವಲ ಎರಡು ವರ್ಷ. ಮೊದಲ ಫಸಲು ಕಾಣುವುದಕ್ಕೆ. ಪ್ರಯೋಗ ಮತ್ತೂ ಮುಂದುವರಿಯುತ್ತದೆ, ಮುಂದೆ ಒಂದೇ ವರ್ಷದಲ್ಲಿ ಫಸಲು ಬರುವಂತೆ ಮಾಡುವ ಪ್ರಯತ್ನವೂ ನನ್ನದಾಗಿದೆ.'

'ಅಂದರೆ ಗಿಡ ನೆಟ್ಟು ಫಸಲು ಕಾಣುವುದಕ್ಕೆ ಕೇವಲ ಒಂದು ವರ್ಷ.'

'ಹೌದು. ನನ್ನ ಗುರಿ ಒಂದು ವರ್ಷದಲ್ಲಿ ಫಸಲು ತೆಗೆಯೋದು!'

'ಯಾವುದೋ ಸಂಶೋಧನಾ ಕೇಂದ್ರದಲ್ಲಿ ಇದೇ ರೀತಿಯ ಪ್ರಯತ್ನ ನಡೆದಿದೆ ಎಂಬುದಾಗಿ ಕೇಳಿದ್ದೇನೆ. ಅದು ಸರಿಯೆ?' ಪ್ಲಾಂಟರ್ ಸೋಮಣ್ಣ ಗಂಭೀರವಾಗಿ ಪ್ರಶ್ನಿಸಿದರು.

'ಈ ರೀತಿಯ ಪ್ರಯತ್ನಗಳು ಜಗತ್ತಿನಾದ್ಯಂತ ನಡೆಯುತ್ತಲಿವೆ. ದೆಹಲಿಯೆಂದೇನು? ಅತ್ಯುತ್ತಮ ಫಲಶ್ರುತಿ ಪಡೆಯುವಲ್ಲಿ ಯಾರು ಸಫಲರಾಗುತ್ತಾರೆ ಎಂಬುದಷ್ಟೆ ಇಲ್ಲಿ ಮುಖ್ಯವಾಗುತ್ತದೆ', ಪ್ರೊ. ಭಾಸ್ಕರ್ ಚುಟುಕಾಗಿ ಉತ್ತರಿಸಿದರು.

'ನಿಮ್ಮ ಸಂಶೋಧನೆಯಲ್ಲಿ ಇತರ ಸಂಶೋಧನಾ ಕೇಂದ್ರಗಳ ಪ್ರಭಾವವಿದೆಯೆ? ಅಥವಾ ಇದೆಲ್ಲವೂ ನಿಮ್ಮದೇ ಆಲೋಚನೆಯೆ?' ಪ್ಲಾಂಟರ್ ಸೋಮಣ್ಣನವರು ಅದೇನೋ ಸಾಹಸ ಮಾಡಿಬಿಟ್ಟೆ ಎಂಬಂತೆ ಪ್ರಶ್ನಿಸಿದರು.

ಪ್ರೊ. ಭಾಸ್ಕರ್ ಅದಕ್ಕೇನೋ ಉತ್ತರ ಕೊಡಲೆಂದು ಎದ್ದು ನಿಲ್ಲುವಷ್ಟರಲ್ಲಿ ನಿರ್ದೇಶಕ ಡಾ. ಚೆಂಗಪ್ಪ ಮಧ್ಯೆ ಪ್ರವೇಶಿಸಿ, 'ದಯವಿಟ್ಟು ಅನಗತ್ಯ ಪ್ರಶ್ನೆಗಳನ್ನು ಕೇಳಬೇಡಿ. ಇದರಿಂದ ಯಾವುದನ್ನೂ ಸಾಧಿಸಿದಂತಾಗುವುದಿಲ್ಲ' ಎಂಬುದಾಗಿ ಹೇಳುತ್ತಲೇ ಪ್ಲಾಂಟರ್ ಚಂದ್ರಪ್ಪನವರು ಪ್ರಕಟಪಡಿಸಿದ ಔದಾರ್ಯದ ಮಹತ್ವವನ್ನೂ ಕೊಂಡಾಡಿ, ಪ್ರೊ. ಭಾಸ್ಕರ್ ಅವರ ಸಾಧನೆಗೆ ಯಶಸ್ಸನ್ನೂ ಕೋರಿ ಅಧ್ಯಕ್ಷ ಭಾಷಣ ಮುಗಿಸಿದರು. ಕಾರ್ಯಕ್ರಮ ಮುಗಿಯುತ್ತಲೇ ಪ್ಲಾಂಟರ್ ಸೋಮಣ್ಣನವರು ಪ್ರೊ. ಭಾಸ್ಕರ್‌ರ ಬಳಿ ಬಂದು, ತನ್ನ ಮಾತು ಅಸಂಬದ್ಧವೆನಿಸಿದ್ದರೆ ಕ್ಷಮಿಸಬೇಕಾಗಿಯೂ, ಇದೇ ರವಿವಾರ ತನ್ನ ಮನೆಯಲ್ಲೊಂದು ಸ್ನೇಹಕೂಟ ಏರ್ಪಡಿಸಲಿದ್ದು ಅದಕ್ಕೆ ಬರಬೇಕೆಂದೂ, ಊರಿಗೆ ಯಾರೇ ಹೊಸದಾಗಿ ಬಂದರೂ ಅವರು ನಮ್ಮೊಳಗೆ ಒಂದಾಗುವುದಕ್ಕೆ ಈ ಕೂಟ ಪ್ರಯೋಜನಕಾರಿಯೆಂದೂ ಹೇಳಿ ಮತ್ತೊಮ್ಮೆ ಅವರನ್ನು ಆಮಂತ್ರಿಸಿ ಹೊರಟು ಹೋದರು.

ಬಡ ಬಡ ಮಾತನಾಡುವ ಸ್ವಭಾವವೊಂದು ಬಿಟ್ಟರೆ ಪ್ಲಾಂಟರ್ ಸೋಮಣ್ಣ ಎಲ್ಲರಿಗೂ ಬೇಕಾದವರು. ಊರಿಗೆ ಯಾರೇ ಬರಲಿ, ಅವರ ಗೆಸ್ಟ್ ಹೌಸಿನಲ್ಲೇ ಅಶನ, ವಸತಿ. ಅತಿಥಿಗಳಿಗೆಂದು ತಮ್ಮ ಎಸ್ಟೇಟಿನಲ್ಲಿ ಪ್ರತ್ಯೇಕ ಮಹಲನ್ನೇ ಕಟ್ಟಿಸಿದ್ದಾರೆ. ಇಲ್ಲಿಯ ಅನೇಕ ಸಂಘ ಸಂಸ್ಥೆಗಳು ಅವರ ಕೃಪಾಪೋಷಿತ. ಪ್ಲಾಂಟರ್ ಚಂದ್ರಪ್ಪನವರು ತನ್ನ ಗೆಳೆಯನಿಗಾಗಿ ವಕಾಲತ್ತು ವಹಿಸಿದ್ದರು. ಪ್ರೊ. ಭಾಸ್ಕರ್ ಆ ಕುರಿತು ಯಾವ ಪ್ರತಿಕ್ರಿಯೆಯನ್ನೂ ವ್ಯಕ್ತಪಡಿಸಲಿಲ್ಲ.

### 3

ನವದುರ್ಗಾ ಎಸ್ಟೇಟಿನ ಪಕ್ಕದ ಮಾದೇವಿ ಎಸ್ಟೇಟಿನ ಕುಟ್ಟಪ್ಪನವರ ಏಕೈಕ ಪುತ್ರ ಪವನ್. ಎಳವೆಯಿಂದಲೇ ದುಷ್ಟ ಸಹವಾಸಗಳಿಗೆ ಬಲಿಬಿದ್ದು ಎಸ್ಟೇಟು ಭಣಗುಟ್ಟುವಂತಾಗಿದ್ದರೂ ಆತನ ಆಡಂಬರಕ್ಕೆ ಯಾವ ಕೊರತೆಯೂ ಇರಲಿಲ್ಲ. ವಯಸ್ಕ ತಂದೆಯ ಹತೋಟಿ ಕೈ ತಪ್ಪಿ ಹೋಗಿರುವುದರಿಂದ ಪವನ್‌ನದ್ದು ನಿರಾತಂಕ ವ್ಯಕ್ತಿತ್ವ. ಮೋಜು ಹೆಚ್ಚುತ್ತಿದ್ದಂತೆಯೇ ಜೇಬು ಖಾಲಿಯಾಗುತ್ತಿತ್ತು. ಉದ್ಯೋಗ ನಿಮಿತ್ತ ದುಬೈಗೆ ಹೋದ ಗೆಳೆಯನ ಬುಲೆಟ್ ಬೈಕ್ ಅವನ ಪಾಲಿನ ಬಹುಮೂಲ್ಯ ಆಸ್ತಿ. ನವದುರ್ಗಾ ಎಸ್ಟೇಟಿನ